ಸಿಸಿ ನಂ. **1624/2022,** ಪಿ.**ಡಬ್ಲ್ಯೂ**:**1**

**ದಿನಾಂಕ:04-02-2026** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:

ನನ್ನ ಹೆಸರು ಬಸವರಾಜ, ನಾನು ಕಳೆದ ನಾಲ್ಕು ವರ್ಷಗಳಿಂದ ಫಿರ್ಯಾದಿ ಕಂಪನಿಯಲ್ಲಿ ಫಿಲ್ಡ್ ಅಫೀಸರ್ ಅಗಿ ಕೆಲಸ ಮಾಡುತ್ತಿದ್ದೇನೆ. ನಿಪಿ-1 ರಲ್ಲಿರುವ 5 ಕಲಂಗಳನ್ನು ಭರಿಸಲಾಗಿರುವುದಿಲ್ಲ ಎಂದರೆ ಸರಿ. ದಿ: 04-02-2022 ರಂದು ನಾನು ಈ ಬ್ಯಾಂಕ್ ನ ಸಿ ಎ ಓ ಅಗಿರಲಿಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನ ಸಹಿ ಅಗಿರುವುದಿಲ್ಲ. ನಾನು ಅಧಿಕಾರ ವಹಿಸಿಕೊಂಡ ನಂತರ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರುವನ್ನು ನಾನು ಸಲ್ಲಿಸಿರುವುದಿಲ್ಲ. ನನ್ನ ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸದೇ ಇರುವ ಕಾಲಕ್ಕೆ ನನಗೆ ಈ ಪ್ರಕರಣದ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಹಿಂದೆ ಈ ಪ್ರಕರಣವನ್ನು ಕುರಿತು ಪ್ರತಿನಿಧಿಸಿದ ವ್ಯಕ್ತಿ ನನಗೆ ಎಲ್ಲಾ ಮಾಹಿತಿಯನ್ನು ನೀಡಿದ್ದಾರೆ. ಅರೋಪಿ ನಮ್ಮ ಕಂಪನಿಯಲ್ಲಿ ದಿ: 30-06-2018 ರಲ್ಲಿ ಸಾಲ ಪಡೆದಿರುತ್ತಾನೆ. ದಿ: 30-06-2018 ರಲ್ಲಿ ಅರೋಪಿ ನಮ್ಮ ಕಂಪನಿಯಲ್ಲಿ ಸಾಲ ಪಡೆದಿರುವ ಬಗ್ಗೆ ನಮ್ಮ ಕಂಪನಿಯ ಯಾವುದಾದರೂ ದಾಖಲಾತಿಯನ್ನು ಹಾಜರು ಪಡಿಸಿದ ಬಗ್ಗೆ ನಮ್ಮ ನ್ಯಾಯಾವಾದಿಯನ್ನು ಕೇಳಬೇಕು. ಆರೋಪಿ ದಿ: 30-06-2018 ರಂದು 65 ಸಾವಿರ ಸಾಲ ಪಡೆದಿರುವ ಬಗ್ಗೆ ದೂರನಲ್ಲಿ ನಮೂದಿಸಿರುವುದಿಲ್ಲ. ಸಾಲವನ್ನು ಅರೋಪಿಗೆ ವ್ಯಾಪಾರಕ್ಕಾಗಿ ನೀಡಲಾಗಿರುತ್ತದೆ. ಸಾಮಾನ್ಯವಾಗಿ ಅರೋಪಿಗೆ ಸಾಲವನ್ನು ನೀಡಬೇಕಾದರೇ ಮೊದಲನೆಯದಾಗಿ ನಮ್ಮ ಕಂಪನಿಯಲ್ಲಿ ಸದಸ್ಯರಾಗಿರಬೇಕು. ಕನಿಷ್ಟ 100 ರೂ. ಒಂದರೇ ಒಂದು ಶೇಷಾವನ್ನು ಖರೀದಿಸಿದರೇ ನಮ್ಮ ಕಂಪನಿಯಲ್ಲಿ ಸದಸ್ಯತ್ವ ಸೀಗುತ್ತದೆ. ಸದರಿ ಶೇರ್ ಗೆ ಡಿವೆಡೆಂಟ್ ನೀಡುತ್ತೇವೆ. ಸದರಿ ಅರೋಪಿಯ ಶೇರ್ ನಮ್ಮಲ್ಲಿ ಇದೆ. ನಂತರ ಸಾಲದ ಅರ್ಜಿ, ಅಧಾರ್ ಕಾರ್ಡ ಮತ್ತು ಅದಕ್ಕೆ ಬೇಕಾದ ಜಮೀನನ್ನು ಪಡೆದಿರುತ್ತೇವೆ. ಈ ಪ್ರಕರಣದ ಅರೋಪಿಯ ಜಾಮೀನುದಾರ ಯಾರು ಎಂದು ನನಗೆ ನೆನಪು ಇರುವುದಿಲ್ಲ. ಸಾಲವನ್ನು 12 ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ. ಆರೊಪಿ ಎಷ್ಟು ಕಂತುಗಳನ್ನು ಭರಿಸಿರುತ್ತಾನೆ ಮತ್ತು ಎಷ್ಟು ಕಂತುಗಳು ಬಾಕಿ ಇವೆ ಎಂದು ಖಾತ ವಿವರಣೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸಾಲಗಾರ ಕಂತುಗಳನ್ನು ಬಭರಿಸಲು ವಿಫಲನಾದಾಗ ಕಂಪನಿ ಸಾಲಗಾರನಿಗೆ ನೋಟಿಸ್ ನೀಡುವ ಹೊಣೆಗಾರಿಕೆ ಇದೆ ಎಂದರೆ ಸರಿ. 3 ಕ್ಕಿಂತ ಹೆಚ್ಚು ಕಂತುಗಳನ್ನು ಸಾಲಗಾರ ಭರಿಸದೇ ಇದ್ದಾಗ ನಾವು ನೋಟಿಸ್ ನ್ನು ನೀಡುತ್ತೇವೆ. ಅರೋಪಿಗೆ ನೀಡಿರುವ ನೋಟಿಸ್ ನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಅರೋಪಿಗೆ ಸಾಲ ನೀಡುವ ಸಮಯದಲ್ಲಿ ಅರೋಪಿಯಿಂದ ಯಾವುದೇ ಖಾಲಿ ಚಕ್ ಪಡೆದುಕೊಂಡಿರುವುದಿಲ್ಲ. ಆರೋಪಿಯು ನನ್ನ ಬ್ಯಾಂಕ್ ನ ಸದಸ್ಯನೆಂದು ಯಾವ ದಿನಾಂಕ ಅಗಿರುತ್ತಾನೆ ಎಂದು ಹೇಳಲು ಅಗುವುದಿಲ್ಲ. ಸಾಲವನ್ನು ಮರುಪಾವತಿ ಮಾಡುವಂತೆ ಕೇಳಿಕೊಳ್ಳಲು ಅರೋಪಿಯ ಸಾಕಷ್ಟು ಸಲ ಹೋಗಿರುತ್ತೇನೆ. ಆರೋಪಿಯ ಮನೆ ಹುಲುಗಿಯ ಅಂಬೇಡ್ಕರ್ ನಗರದ ಸರ್ಮಥ್ಯ ಹೋಟೆಲ್ ಬಳಿ ಮನೆ ಇದೆ ಮತ್ತು ಅರೋಪಿ ಹುಲುಗಿ ದೇವಸ್ಥಾನದಲ್ಲಿ ಕೆಲಸ ಮಾಡುತ್ತಾನೆ. ಅರೋಪಿಯಿಂದ ಚಕ್ ಯಾವಾಗ ಎಲ್ಲಿಂದ ಪಡೆಯಲಾಗಿದೆ ಎಂದು ನನಗೆ ನೆನಪು ಇಲ್ಲ ಅದನ್ನು ನನ್ನ ಹಳೆಯ ಸಿ ಎ ಓ ರವರಿಗೆ ಗೊತ್ತು. ಚಕ್ ಅರೋಪಿಯಿಂದ ಪಡೆಯುವ ಕಾಲಕ್ಕೆ ಸಾಲದ ಬಾಕಿ ಎಷ್ಟು ಇದೆ ಎಂದು ನಾನು ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ಚಕ್ ನಲ್ಲಿ ಇರುವ ಬರವಣಿಗೆ ಮತ್ತು ಮೊತ್ತ ಯಾರದು ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಆರೋಪಿ 2017 ರಲ್ಲಿ ಮೊದಲ ಬಾರಿಗೆ ಸಾಲ ಪಡೆದಿದ್ದ ಎಂದರೆ ಸರಿ. 2017 ರಲ್ಲಿ ಅರೋಪಿ ಸಾಲ ಪಡೆಯುತ್ತಿದ್ದಾಗ ನಮ್ಮ ಸಂಸ್ಥೆಗೆಯವರು ಸಹಿ ಮಾಡಿದ ಎರಡು ಚಕ್ ಗಳನ್ನು ಅರೋಪಿಯಿಂದ ಪಡೆದುಕೊಂಡಿರುತ್ತಾರೆ ಎಂದರೆ ಅಬಗ್ಗೆ ನನಗೆ ಮಾಹಿತಿ ಇಲ್ಲ. ಅರೋಪಿ ಎಲ್ಲಾ ಕಂತುಗಳನ್ನು ಭರಿಸಿ ಕೊನೆಯ ಎರಡು ಕಂತುಗಳು ಮಾತ್ರ ಬಾಕಿ ಇತ್ತು ಎಂದರೆ ಅಬಗ್ಗೆ ನನಗೆ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ಹಾಜರು ಪಡಿಸಿದ ಚಕ್ ನ ಮೊತ್ತವನ್ನು ಅರೋಪಿಯು ನೀಡಲು ಹೊಣೆಗಾರನು ಅಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಲದ ಖಾತೆ ನಂ. ಟಿಪಿಎಸ್/ಬಿಯುಸ್/000548 ಮತ್ತು ಕಷ್ಟಮರ್ ನಂ. 1196 ಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಖಾಸಗಿ ಫಿರ್ಯಾದಿಯ ಪ್ರಕಾರ ಅರೋಪಿ 46 ಸಾವಿರ ರೂ. ಕೊಡಬೇಕಾದ ಹಣ ಬಾಕಿ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಸರಿಯಾದ ಮಾಹಿತಿ ಇರುವುದಿಲ್ಲ ಅಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನನ್ನ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಅಕಾರಣಕ್ಕೆ ನಾನು ಸಾಕ್ಷ್ಯ ನುಡಿಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಕೀಲ ಪತ್ರವನ್ನು ಸಹ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

**1** ನೇ ಹೆ. **ಜೆ ಎಂ ಎಫ್ ಸಿ ಕೊಪ್ಪಳ.**